**ಕರ್ನಾಟಕ ಸರ್ಕಾರ**

ಸಂಖ್ಯೆ:ಕಾಶಿಇ/74/ಮಲೇಆ ಸುತ್ತೋಲೆ/2017-18/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:22.09.2017

**ಸುತ್ತೋಲೆ**

ವಿಷಯ: ಪಿ.ಹೆಚ್.ಡಿ ಪದವಿ ಪಡೆದ ಪ್ರಯುಕ್ತ ಮಂಜೂರು ಮಾಡಿರುವ ಮುಂಗಡ ವೇತನ ಬಡ್ತಿಗಳ ಬಗ್ಗೆ

ಉಲ್ಲೇಖ: ಮಹಾಲೇಖಪಾಲರ ಆಕ್ಷೇಪಣೆ ಪತ್ರ ದಿನಾಂಕ:31.07.2017 (Audit Enquiry No.20)

*********

ಯುಜಿಸಿಯು 2009ನೇ ಸಾಲಿನಲ್ಲಿ University Grant Commission (Minimum Standards and Procedure for award of MPhil/PhD Degree)ರನ್ನು ಹೊರಡಿಸಿರುವ ಹಿನ್ನೆಲೆಯಲ್ಲಿ ದಿನಾಂಕ:11.07.2009ರ ನಂತರ ಪಿ.ಹೆಚ್.ಡಿ ಪದವಿಯನ್ನು ಸದರಿ ನಿಯಮದಲ್ಲಿ ನೀಡಿರುವ ನಿರ್ದೇಶನವನ್ನು ಅನುಸರಿಸಿ ಪದವಿ ಪ್ರಧಾನ ಮಾಡಬೇಕಾಗಿರುತ್ತದೆ. ಆದರೆ, ದಿನಾಂಕ:11.07.2009ರ ನಂತರ ಪಿ.ಹೆಚ್.ಡಿ ಪದವಿಗೆ ನೋಂದಣಿ ಮಾಡಿ ಯುಜಿಸಿ 2009ರ ನಿಯಮದಲ್ಲಿ ನೀಡಿರುವ ಸೂಚನೆಗಳನ್ನು ಪಾಲಿಸದೆ ಪದವಿ ಪಡೆದಿರುವ ಅನುದಾನಿತ ಕಾಲೇಜಿನ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ತಮ್ಮ ಕಛೇರಿಯು ಮಂಜೂರು ಮಾಡಿರುವ ಕ್ರಮವನ್ನು ಗಮನಿಸಲಾಗಿದೆ.

ಪರಿಶೀಲಿಸಲಾಗಿ ಯುಜಿಸಿ 2009ರ ನಿಯಮಗಳ ಅನುಸಾರವಾಗಿ ಪಿ.ಹೆಚ್.ಡಿ ಪದವಿ ಪಡೆಯದ ಅನುದಾನಿತ ಕಾಲೇಜುಗಳ ಬೋಧಕರುಗಳಿಗೆ ಮುಂಗಡ ವೇತನ ಬಡ್ತಿಗಳನ್ನು ಮಂಜೂರು ಮಾಡಿದ್ದಲ್ಲಿ ಸದರಿ ಬಡ್ತಿಗಳನ್ನು ಹಿಂಪಡೆಯುವಂತೆ ಹಾಗೂ ಈ ಕುರಿತು ವರದಿಯನ್ನು ದಿನಾಂಕ:28.09.2017ರೊಳಗೆ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

**ಇವರಿಗೆ:**

ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ ಹಾಗೂ ಕಲಬುರಗಿ-ತಮ್ಮ ಕಛೇರಿ ವ್ಯಾಪ್ತಿಯ ಅನುದಾನಿತ ಕಾಲೇಜುಗಳ ಮಾಹಿತಿಗಳನ್ನು ಕ್ರೋಢೀಕರಿಸಿ ಸಲ್ಲಿಸುವಂತೆ ತಿಳಿಸಲಾಗಿದೆ.

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3. ಆಯುಕ್ತರ ಆಪ್ತಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
5. ಮುಖ್ಯಆಡಳಿತಾಧಿಕಾರಿಗಳ ಆಪ್ತ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
6. ಮ್ಯಾನೇಜರ್/ಅಧೀಕ್ಷಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
7. ಕಛೇರಿ ಪ್ರತಿ.

74-AG objection